**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.153/2020**

**(ಚಾ.ಸಾ.1/ಪ್ರಾ.ಸಾ.2)**

ತಾಃ 09-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಹಿಮಾಂಶು ಕುಮಾರ್ |
| ತಂದೆಯ ಹೆಸರು | ಸಂಜಯ್ ಕುಮಾರ್ |
| ವಯಸ್ಸು | 23 ವರ್ಷ |
| ಉದ್ಯೋಗ | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸ ಸ್ಥಳ | ತೂಬರಹಳ್ಳಿ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ.2 ಸಂಜಯ್ ಕುಮಾರ್ ನನ್ನ ತಂದೆ ಆಗಿರುತ್ತಾರೆ. ಸುಮಾರು 3 ವರ್ಷಗಳ ಹಿಂದೆ ರಾತ್ರಿ 08ಃ00 ಗಂಟೆ ಸಮಯದಲ್ಲಿ ನಮ್ಮ ಮನೆಯಲ್ಲಿ ಟಿವಿ ನೋಡುತ್ತಾ ಕುಳಿತಿದ್ದಾಗ ಸೆಕ್ಯೂರಿಟಿ ಗಾರ್ಡ್ ನಮ್ಮ ಮನೆಗೆ ಬಂದು ತೂಬರಹಳ್ಳಿಯಲ್ಲಿರುವ ವಾಟರ್ ಪ್ಲಾಂಟ್ ಬಳಿ ನನ್ನ ತಂದೆಗೆ ರಕ್ತ ಬರುತ್ತಿರುವುದಾಗಿ ತಿಳಿಸಿರುತ್ತಾರೆ. ನಾನು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ.2 ರವರು ಸ್ಥಳದಲ್ಲಿ ಹಾಜರಿದ್ದು, ಅವರಿಗೆ ರಕ್ತ ಬರುತ್ತಿರುವುದು ಕಂಡುಬಂದ ಕಾರಣ ನಾನು ನನ್ನ

ತಂದೆಯನ್ನು ಚಿಕಿತ್ಸೆಗಾಗಿ ವೈದೇಹಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇನೆ. ನನ್ನ ತಂದೆ ವೈದೇಹಿ ಆಸ್ಪತ್ರೆಯಲ್ಲಿ 1 ತಿಂಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ನಾನು ನನ್ನ ತಂದೆಯ ಬಳಿ ಘಟನೆಯ ಬಗ್ಗೆ ವಿಚಾರಿಸಿದಾಗ ಅವರು ಘಟನೆಯ ಬಗ್ಗೆ ವಿವರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಅದಾದ ನಂತರವೂ ಸಹ ಚಾಸಾ.2 ರವರು ನನಗೆ ಘಟನೆಯ ಬಗ್ಗೆ ಹೇಳಿರುವುದಿಲ್ಲ. ಸಾಕ್ಷಿದಾರರು ದೂರು ಹಾಗೂ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

2. ನಾನು ಘಟನೆ ಆದ ದಿನ ಪೋಲೀಸರಿಗೆ ನಿಪಿ.2 ದೂರು ದಾಖಲಿಸಿರುತ್ತೇನೆ. ನಿಪಿ.2 ರಲ್ಲಿ ನಾನು ಮೇಲೆ ಹೇಳಿದಂತೆ ವಿಚಾರವನ್ನು ತಿಳಿಸಿರುತ್ತೇನೆ. ನನ್ನ ತಂದೆಯ ತಲೆಯಿಂದ ರಕ್ತ ಬರುತ್ತಿದ್ದು, ಯಾವುದೋ ಚೂಪಾದ ಆಯುಧದಿಂದ ಪೆಟ್ಟಾಗಿರುವುದು ತಿಳಿದುಬಂದಿರುತ್ತದೆ. ಸಾಕ್ಷಿದಾರರು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಾನು ಪೋಲೀಸ್ ಠಾಣೆಗೆ ಹೋದಾಗ ಸಹಿ ಮಾಡಿದ್ದು, ಎಷ್ಟು ದಿವಸಗಳ ನಂತರ ಎಂದು ನನಗೆ ತಿಳಿದಿಲ್ಲ. ನನ್ನ ಸಮಕ್ಷಮ ಪೋಲೀಸರು ನಿಪಿ.3 ಮಹಜರ್ ಮಾಡುವಾಗ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ನಾನು ಘಟನೆಗೆ ಸಂಬಂಧಿಸಿದಂತೆ ಪೋಲೀಸರಿಗೆ ಮುಂದುವರೆದ ಹೇಳಿಕೆ ನೀಡಿಲ್ಲ. ಈ ಪ್ರಕರಣದಲ್ಲಿ ಬಾಗಿಯಾದ ನ್ಯಾಯಾಲಯದ ಮುಂದೆ ಹಾಜರಿರುವ 3 ಮತ್ತು 4ನೇ ಆರೋಪಿತರನ್ನು ಅದೇ ರೀತಿ ಗೈರು ಹಾಜರಾಗಿರುವ 1 ಮತ್ತು 2ನೇ ಆರೋಪಿತರನ್ನು ನೋಡಿದಲ್ಲಿ ಗುರುತಿಸಲು

ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು ನಿಪಿ.2 ದೂರನ್ನು ದಿನಾಂಕ 05-07-2020 ರಂದು ಸಲ್ಲಿಸಿದ್ದೆನು ಎಂದರೆ ಸರಿ. ನಾನು ಕೃತ್ಯ ಸ್ಥಳದಲ್ಲಿ ಚಾಸಾ.2 ರವರನ್ನು ಭೇಟಿ ಮಾಡಿದಾಗ ಕೆಲವು ವ್ಯಕ್ತಿಗಳು ತನ್ನ ಮೇಲೆ ದೊಣ್ಣೆ, ಕತ್ತಿ ಹಾಗೂ ಚಾಕುವಿನಿಂದ ಹಲ್ಲೆ ಮಾಡಿ ಕೊಲೆ ಮಾಡಲು ಪ್ರಯತ್ನಿಸಿರುವುದಾಗಿ ತಿಳಿಸಿದ್ದರು ಎಂದರೆ ಸರಿ. ನಾನು ಮೊದಲಿಗೆ ಚಾಸಾ.2 ರವರನ್ನು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ನನ್ನ ತಂದೆಯನ್ನು ವೈದ್ಯರು ವೈದೇಹಿ ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿ.

2. ನಿಪಿ.3 ಅನ್ನು ಪೋಲೀಸರು ನಾರಾಯಣರೆಡ್ಡಿ ಇವರಿಗೆ ಸೇರಿದ ತೂಬರಹಳ್ಳಿ ಗ್ರಾಮದ ಸರ್ವೆ ನಂ.56/2 ರ ತೆಂಗಿನ ತೋಟದಲ್ಲಿ ದಿನಾಂಕ 05-07-2020 ರಂದು ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಪೋಲೀಸರಿಗೆ ಕೃತ್ಯ ಸ್ಥಳ ತೋರಿಸಿದ್ದೆನು ಎಂದರೆ ಸರಿ. ನಿಪಿ.3 ಮಾಡುವ ಸಮಯದಲ್ಲಿ ಪೋಲೀಸರು ಸ್ಥಳದಿಂದ ರಕ್ತ ಮಿಶ್ರಿತ ಮಣ್ಣು, ರಕ್ತದ ಕಲೆ ಇದ್ದ ಒಂದು

ಜೊತೆ ಚಪ್ಪಲಿ, ಮಾದರಿ ಮಣ್ಣನ್ನು ಜಪ್ತಿಪಡಿಸಿದ್ದು, ನಾನು ಪೋಲೀಸರ ಮುಂದೆ ಹಾಜರುಪಡಿಸಿದ ರಕ್ತದ ಕಲೆ ಇರುವ ಕಪ್ಪು ಬಣ್ಣದ ಟಿ ಶರ್ಟ್ ಹಾಗೂ ರಕ್ತ ಆಗಿದ್ದ ನೈಟ್ ಪ್ಯಾಂಟ್ ಅನ್ನು ಪೋಲೀಸರು ಅಮಾನತ್ತು ಪಡಿಸಿದ್ದರು ಎಂದರೆ ಸರಿ. ನಿಪಿ.3 ಅನ್ನು ಕೃತ್ಯ ಸ್ಥಳದಲ್ಲಿ ಮಧ್ಯಾಹ್ನ 02:00 ರಿಂದ 03:30 ರ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಕೃತ್ಯ ಸ್ಥಳದಲ್ಲಿ ಚಾಸಾ.10 ಮತ್ತು 11 ರವರು ಹಾಜರಿದ್ದು, ನಾನು ನಿಪಿ.3 ಕ್ಕೆ ಕೃತ್ಯ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕ 16-07-2020 ರಂದು ಪೋಲೀಸ್ ಠಾಣೆಯಲ್ಲಿ 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, ಅವರೇ ಚಾಸಾ.2 ರವರಿಗೆ ಹಲ್ಲೆ ಮಾಡಿ ಕೊಲೆಗೆ ಪ್ರಯತ್ನಿಸಿದ ವಿಚಾರ ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಹೇಳಿಕೆಯ ಭಾಗವನ್ನು ಓದಿ ಹೇಳಿದ್ದು ಅದರಂತೆ ತಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ಉತ್ತರಿಸಿದ್ದು ಸದರಿ ಹೇಳಿಕೆಯ ಭಾಗವನ್ನು ನಿಪಿ.4 ಎಂದು ಗುರುತಿಸಲಾಯಿತು.

3. ಈ ಹಂತದಲ್ಲಿ ಮಾನ್ಯ ಪಿ.ಪಿ.ರವರು ಸೀಲ್ ಮಾಡಿದ ಪ್ಯಾಕೆಟ್ ಗಳನ್ನು ತೆಗೆಯಲು ಅನುಮತಿ ಕೋರಿದ್ದು, ನೀಡಲಾಯಿತು. ಅದರಂತೆ ಸೀಲ್ಡ್ ಪ್ಯಾಕೆಟ್ ಗಳನ್ನು ಓಪನ್ ಮಾಡಿ, ಅದರಲ್ಲಿರುವ ಮಾದರಿ ಮಣ್ಣು, ರಕ್ತ ಮಿಶ್ರಿತ ಮಣ್ಣು, ರಕ್ತದ ಕಲೆ ಇರುವ ಒಂದು ಜೊತೆ ಚಪ್ಪಲಿ, ರಕ್ತದ ಕಲೆ ಇರುವ ಒಂದು ಕಪ್ಪು ಬಣ್ಣದ ಟಿ ಶರ್ಟ್ ಹಾಗೂ ರಕ್ತದ ಕಲೆ ಇರುವ ಒಂದು ಪಾಚಿ ಬಣ್ಣದ ನೈಟ್ ಪ್ಯಾಂಟ್ ಅನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.1

ರಿಂದ 5 ಎಂದು ಗುರುತಿಸಲಾಯಿತು. ಆರೋಪಿತರು ಕೃತ್ಯ ಎಸಗಿದ ಬಗ್ಗೆ ನಾನು ನಿಪಿ.4 ರಂತೆ ಮುಂದುವರೆದ ಹೇಳಿಕೆ ನೀಡಿದ್ದರೂ ಸಹ ಆರೋಪಿತರ ಜೊತೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಪರ ಶ್ರೀ.ಹೆಚ್.ವಿ.ಪಿ.ವಕೀಲರ ಪರವಾಗಿ ಶ್ರೀ.ಹೆಚ್.ಬಿ.ಹೆಚ್.ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.